# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.

**C.C No.** 1270/2021

| | | |
|---|---|---|
| ಸಾಕ್ಷಿದಾರರ ಹೆಸರು: | ಗೀತಾ | ಪ್ರಮಾಣ ಮಾಡಿದ ದಿನಾಂಕ 04.11.2024. |
| ಗಂಡನ ಹೆಸರು: | ಶಿವಕುಮಾರ ಸ್ವಾಮಿ | |
| ವಯಸ್ಸು: | 42 ವರ್ಷ | |
| ವೃತ್ತಿ: | ಗೃಹಿಣಿ | CW-1 |
| ವಾಸಸ್ಥಳ: | ಕೆ.ಬಸವಪುರ | PW-1 |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು, ಅವರು ನಮ್ಮ ಊರಿನವರು. ಈಗ ಸುಮಾರು 2 ವರ್ಷಗಳ ಹಿಂದೆ ಜಮೀನಿನಲ್ಲಿ ನೀರು ಹರಿಯಲು ಹೆಚ್ಚು ಹಳ್ಳ ತೆಗೆದಿದ್ದ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ಕೇವಲ ಬಾಯಿ ಮಾತಿನ ಜಗಳವಾಗಿರುತ್ತದೆ. ಕೇವಲ ಬಾಯಿ ಮಾತಿನ ಜಗಳವನ್ನು ಹೊರತುಪಡಿಸಿದರೆ ಇನ್ನೇನು ಆಗಿರುವುದಿಲ್ಲ. ಆರೋಪಿತರು ನಮ್ಮ ಮೇಲೆ ಯಾವುದೇ ಅಪರಾಧಿಕ ಕೃತ್ಯಗಳನ್ನು ಮಾಡಿರುವುದಿಲ್ಲ.

ನಾನು ಈ ವಿಚಾರವನ್ನು ಪೊಲೀಸರಿಗೆ ತಿಳಿಸಲು ಹೋದಾಗ ಅವರ ಕೋರಿಕೆಯ ಮೇರೆಗೆ 2 ದಾಖಲಾತಿಗಳಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ. ಆ ದಾಖಲಾತಿಗಳು ಪ್ರಥಮ ಮಾಹಿತಿ ಹೇಳಿಕೆ ಹಾಗೂ ಮಹಜರ್ ಆಗಿರುತ್ತದೆ. ಸಾಕ್ಷಿಯು ಸದರಿ ದಾಖಲಾತಿಗಳಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಪ್ರಥಮ ಹೇಳಿಕೆಯನ್ನು ನಿಪಿ-1, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 1(ಎ), ಮಹಜರ್ ನಿಪಿ-2, ಹಾಗೂ ದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 2(ಎ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ಸಾಕ್ಷಿಗೆ

ಈಗ ಕಲಂ 164 CrPC ಅಡಿಯಲ್ಲಿ ದಾಖಲು ಮಾಡಿಕೊಂಡಿರುವ ಹೇಳಿಕೆಯಲ್ಲಿ ಇರುವ ತಮ್ಮ 2 ಸಹಿಗಳನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಗುರುತಿಸಿರುತ್ತಾರೆ ಆದ್ದರಿಂದ ಸದರಿ ಹೇಳಿಕೆಯನ್ನು ಈಗ ನಿಪಿ-3 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ನಾನು ಚಾಮರಾಜನಗರದ ನ್ಯಾಯಾಲಯಕ್ಕೆ ಹೋಗಿರುತ್ತೇನೇ ಆದರೆ ನಾನು ಅಲ್ಲಿ ಏನು ಹೇಳಿಕೆ ನೀಡಿರುತ್ತೇನೆ ನನಗೆ ಈಗ ನೆನಪಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿರುವುದಿಲ್ಲ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿನಾಂಕ 27.06.2022 ರಂದು ಬೆಳಿಗ್ಗೆ 9-15 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಸರ್ವೆ ನಂಬರ್ 263 ಜಮೀನಿನಲ್ಲಿ ರಸ್ತೆಗೆ ಹೊಂದಿಕೊಂಡಂತೆ ಇರುವ ಇಟ್ಟಿಗೆ ಶೆಡ್ಡಿನ ಬಳಿ 1ನೇ ಆರೋಪಿಯು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕೆಲಸ ಮಾಡಿಸುತ್ತಿದ್ದಾಗ ಇತರರಿಗಿಂತ ಚಾಸಾ-**2** ರವರ ಜಮೀನಿನಲ್ಲಿ ನೀರು ಹರಿಯಲು ಹೆಚ್ಚು ಹಳ್ಳ ತೆಗೆದಿದ್ದ ವಿಚಾರವಾಗಿ ನಾನು ಮತ್ತು ಚಾಸಾ-**2** ರವರು **1**ನೇ ಆರೋಪಿಯ ಜೊತೆ ಮಾತನಾಡುತ್ತಾ ಇದ್ದಾಗ **2** ಮತ್ತು **3**ನೇ ಆರೋಪಿತರು ಅಲ್ಲಿಗೆ ಬಂದು ನನ್ನ ಮತ್ತು ಚಾಸಾ-**2** ರವರ ಜೊತೆ **1** ರಿಂದ **3** ನೇ ಆರೋಪಿತರು ಜಗಳ ತೆಗೆದು, ಆರೋಪಿಗಳು ನನ್ನನ್ನು ಮತ್ತು ಚಾಸಾ **-2** ರವರನ್ನು ಉದ್ದೇಶಿಸಿ ಅವ್ಯಾಚ್ಯ ಶಬ್ದಗಳಿಂದ ಬೈದ್ದು, **1**ನೇ ಆರೋಪಿಯು ಚಾಸಾ-**1** ರವರ ಕೈಯನ್ನು ಹಿಡಿದುಕೊಂಡು ಅವರಿಗೆ ಹೊಡೆದು ಬಿಡಿಸಲು ಬಂದ ನನ್ನನ್ನು ಹಿಂದಕ್ಕೆ ತಳ್ಳಿರುತ್ತಾನೆ ಎಂದರೆ ಸರಿಯಲ್ಲ. **2**ನೇ ಆರೋಪಿತನು ಕೆಳಗೆ ಬಿದ್ದಿದ್ದ ನನ್ನನ್ನು ಕಾಲಿನಿಂದ ಒದ್ದಿರುತ್ತಾನೆ ಎಂದರೆ ಸರಿಯಲ್ಲ.

ದಿನಾಂಕ 28.06.2022 ರಂದು ಮಧ್ಯಾಹ್ನ 03-30 ರಿಂದ 04--15 ಗಂಟೆ ವರೆಗೆ ಕೃತ್ಯ ನಡೆದ ಸ್ಥಳದಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ-4 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆಯನ್ನು ಪೊಲೀಸರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ನ್ನು ನನಗೆ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಅದಕ್ಕೆ ಸಹಿಯನ್ನು ಮಾಡಿರುತ್ತೇನೆ ಎಂದರೆ

ಸರಿಯಲ್ಲ. ನಾನು ಈಗ ಓದಿ ಹೇಳಿದ ಹಾಗೆ ಮಾನ್ಯ ನ್ಯಾಯಾಧೀಶರ ಮುಂದೆ ನಿಪಿ-3 ರಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ನಾನು ಪೊಲೀಸರಿಗೆ ಈ ವಿಚಾರವಾಗಿ ಈಗ ಓದಿ ಹೇಳಿದ ಹಾಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮರು ನಿರಾಕರಿಸಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ಈಗ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ನಿಜ. ರಾಜಿ ಮಾಡಿಕೊಂಡ ಕಾರಣ ಆರೋಪಿತರನ್ನು ಶಿಕ್ಷೆಯಿಂದ ಪಾರು ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಪಾಟೀ ಸವಾಲು: ಆರೋಪಿ ಪರ ವಕೀಲರರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

04.11.2024

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.